ಅಸಲು ದಾವೆ ನಂ.17/2016

ಪಿ.ಡಬ್ಲೂಃ 1- ಜಯಮ್ಮ ಬಿನ್ ವೆಂಕಟಪ್ಪ

ದಿನಾಂಕಃ 29/08/2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು 7 ನೇ ಪ್ರತಿವಾದಿ ಪರವಾಗಿ ಶ್ರೀ ಕೆ.ವಿ.ವಿ. ವಕೀಲರಿಂದ**

(ಸಾಕ್ಷಿಗೆ ಕನ್ನಡ ಭಾಷೆ ಅರ್ಥವಾಗುವುದಿಲ್ಲ ಮತ್ತು ಕೇವಲ ತೆಲುಗು ಭಾಷೆ ಅರ್ಥವಾಗುತ್ತದೆ ಎಂದು ಹೇಳಿರುವುದರಿಂದ ಕನ್ನಡ ಮತ್ತು ತೆಲುಗು ಭಾಷೆ ಬಲ್ಲವರಾದ ಶ್ರೀ ಆರ್.ಎಸ್. ವಕೀಲರನ್ನು ಭಾಷಾಂತರಕಾರ ಎಂದು ನೇಮಕ ಮಾಡಲಾಗಿರುತ್ತದೆ).

1. ನನ್ನ ಮದುವೆಯಾಗಿ ಈಗ 45 ವರ್ಷಗಳು ಆಗಿರುತ್ತದೆ. ಮದುವೆಯಾದ ಸಮಯದಿಂದ ನಾನು ನನ್ನ ಗಂಡನ ಮನೆಯಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ನನ್ನ ತಂದೆಯು ಈಗ ಸುಮಾರು 20 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನಮ್ಮ ತಂದೆಯು ತಮ್ಮ ಜೀವಿತಾವಧಿಯಲ್ಲಿಯೇ ಕುಟುಂಬಂದ ಸ್ವತ್ತುಗಳಲ್ಲಿ ವಿಭಾಗ ಮಾಡಿ ಎಲ್ಲಾ ದಾವಾ ಸ್ವತ್ತುಗಳನ್ನು 2 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ನಮ್ಮ ತಂದೆಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ ಆದರೆ ಎಲ್ಲಾ ದಾವಾ ಸ್ವತ್ತುಗಳು ನಮ್ಮ ಪಿತ್ರಾರ್ಜಿತ ಸ್ವತ್ತುಗಳು ಆಗಿರುತ್ತದೆ.

2. ನಾವು ದಾವೆ ಸಲ್ಲಿಸುವುದಕ್ಕೂ ಮುಂಚೆ ಪ್ರತಿವಾದಿಯರಿಗೆ ಕಾನೂನು ಬದ್ಧ ನೋಟೀಸನ್ನು ನೀಡಿದ್ದು ಅದನ್ನು ಯಾವಾಗ ನೀಡಿರುತ್ತೇವೆ ಎಂದು ನನಗೆ ದಿನಾಂಕ ಗೊತ್ತಿರುವುದಿಲ್ಲ. ಸದರಿ ನೋಟೀಸನ್ನು ನಾನು ಮತ್ತು 2 ನೇ ವಾದಿ ನಮ್ಮ ಸಹೋದರರಿಗೆ ಕಳುಹಿಸಿರುತ್ತೇವೆ. ನಾವು ನೋಟೀಸ್ ಕಳುಹಿಸುವುದಕ್ಕೂ ಮುಂಚೆ ದಾವಾ ಸ್ವತ್ತುಗಳೆಲ್ಲವೂ 2 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲಾಗಿದ್ದವು ಎಂದರೆ ಸರಿಯಲ್ಲ. ಸದರಿ ವಿಚಾರ ನಮಗೆ ಗೊತ್ತಿದ್ದರೂ ಸಹ ನಾವು ಎಲ್ಲರಿಗೂ ನೋಟಿಸ್ ಕೊಡುವುದನ್ನು ಬಿಟ್ಟು ಕೇವಲ 1 ಮತ್ತು 7 ನೇ ಪ್ರತಿವಾದಿಯರಿಗೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ನೋಟೀಸಿಗೆ 1 ಮತ್ತು 7 ನೇ ಪ್ರತಿವಾದಿಯರು ಉತ್ತರ ಕೊಟ್ಟಿರುತ್ತಾರೆ ಆದರೆ ನಾನು ಅದನ್ನು ತೆಗೆದುಕೊಂಡಿರುವುದಿಲ್ಲ. ಸದರಿ ಉತ್ತರದಲ್ಲಿ ನಾವು ನಮ್ಮ ಕುಟುಂಬಕ್ಕೆ ಬೇರೆ ಸ್ವತ್ತುಗಳು ಸಹಾ ಇರುತ್ತವೆ ಎಂದು ಅವರು ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

**3.** ಪಟ್ರಾಪಳ್ಳಿ ಗ್ರಾಮದ ಸರ್ವೆ ನಂ.**409/5** ಬಿ, ಸರ್ವೆ ನಂ.**409/6** ಎ ಮತ್ತು ಸರ್ವೆ ನಂ.**409/6** ಬಿ ಸ್ವತ್ತುಗಳು ನಮ್ಮ ಪಿತ್ರಾರ್ಜಿತ ಸ್ವತ್ತುಗಳಾಗಿರುತ್ತವೆ. ಅವುಗಳನ್ನು ನಾನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಈಗ ಸುಮಾರು 20 ವರ್ಷಗಳ ಹಿಂದೆ ನಮ್ಮ ಕುಟುಂಬದಿಂದ ಪ್ರತ್ಯೇಕವಾಗಿ ವಾಸವಾಗಿರುತ್ತಾರೆ ಆದರೆ ನಮ್ಮ ಮಧ್ಯ

ವಿಭಾಗ ಆಗಿರುವುದಿಲ್ಲ. ದಿನಾಂಕ 29.01.1990 ರಂದು 1 ನೇ ಪ್ರತಿವಾದಿಯು ನಮ್ಮ ತಂದೆಯ ಹೆಸರಿಗೆ ಒಂದು ರಿಲೀಸ್ ಪತ್ರವನ್ನುಬರೆದುಕೊಟ್ಟು ಒಟ್ಟು ಕುಟುಂಬದಿಂದ ಹೊರ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಆಗ ನಮ್ಮ ತಂದೆಯು ದಾವಾ ಐಟಂ ನಂ.1 ಸ್ವತ್ತು ಅವರ ಸ್ವಯಾರ್ಜಿತ ಸ್ವತ್ತು ಆಗಿರುವುದರಿಂದ ಅದನ್ನು 1 ನೇ ಪ್ರತಿವಾದಿಯ ಹೆಸರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ಮೇರೆಗೆ 1 ನೇ ಪ್ರತಿವಾದಿಯು ದಾವಾ ಐಟಂ ನಂ.1 ಸ್ವತ್ತಿನ ದಾಖಲೆಗಳನ್ನು ತಮ್ಮ ಹೆಸರಿಗೆ ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ಸ್ವತ್ತನ್ನು 7 ನೇ ಪ್ರತಿವಾದಿಗೆ ಯಾರು ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಸ್ವತ್ತನ್ನು 1 ನೇ ಪ್ರತಿವಾದಿ ಹಾಗೂ ಅವರ ಹೆಂಡತಿ ಮಕ್ಕಳು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಈ ದಾವೆ ದಾಖಲಿಸುವಾಗ 1 ನೇ ಪ್ರತಿವಾದಿಯ ಹೆಂಡತಿಯಾದ ಪ್ರೇಮಾವತಿಯವರು ಜೀವಂತವಾಗಿದ್ದರು.

4. ದಾವಾ ಸ್ವತ್ತುಗಳೆಲ್ಲವೂ ವಿ.ಕೋಟಾ ಮುಖ್ಯ ರಸ್ತೆಗೆ ಹೊಂದಿಕೊಂಡು ಇರುತ್ತವೆ ಎಂದರೆ ಸರಿ. 7 ನೇ ಪ್ರತಿವಾದಿಯು ದಾವಾ ಐಟಂ ನಂ.1 ಸ್ವತ್ತನ್ನು ಖರೀದಿಸಿದ ನಂತರ ಅದರಲ್ಲಿ ಇಟ್ಟಿಗೆ ಫ್ಯಾಕ್ಟರಿಯನ್ನು ನಿರ್ಮಿಸಿ ಸುಮಾರು 30-40 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಜಮೀನನ್ನು ಅಭಿವೃದ್ಧಿ ಪಡಿಸಿರುತ್ತಾರೆ ಎಂದರೆ ನಾವು ದಾವೆ ದಾಖಲಿಸಿದ ನಂತರ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

5. 7 ನೇ ಪ್ರತಿವಾದಿಯು ಈ ದಾವೆಯಲ್ಲಿ ಏನೆಲ್ಲಾ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದು ನಾನು ತಿಳಿದುಕೊಂಡಿಲ್ಲ. ದಾವಾ ಸ್ವತ್ತುಗಳಲ್ಲಿ ನಮ್ಮ ತಂದೆಯು ಈಗಾಗಲೇ ವಿಭಾಗ ಮಾಡಿ ಕೊಟ್ಟಿರುವುದರಿಂದ ಅವುಗಳಲ್ಲಿ ನನಗೆ ಮತ್ತು 2 ನೇ ವಾದಿಗೆ ಯಾವುದೇ ಭಾಗ ಇರುವುದಿಲ್ಲ ಎಂದರೆ ಸರಿಯಲ್ಲ.

6. 8 ನೇ ಪ್ರತಿವಾದಿಯು ನಮ್ಮ ದೊಡ್ಡಪ್ಪನ ಮಗ. ನಮ್ಮ ತಂದೆ ಮತ್ತು ಅವರ ಸಹೋದರ ಮಧ್ಯ ವಿಭಾಗ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ವಿಭಾಗದಲ್ಲಿಯೇ ದಾವಾ ಸ್ವತ್ತುಗಳು ನಮ್ಮ ತಂದೆಯ ಹಿಸ್ಸೆಗೆ ಬಂದಿರುತ್ತವೆ ಎಂದು ನುಡಿಯುತ್ತಾರೆ. ಸದರಿ ವಿಭಗದಲ್ಲಿ ನಮ್ಮ ತಂದೆಯ ಹಿಸ್ಸೆಗೆ ದಾವಾ ಐಟಂ ನಂ.1 ಸ್ವತ್ತನ್ನು ಹೊರತು ಪಡಿಸಿ ಬೇರೆ ಸ್ವತ್ತುಗಳು ಮಾತ್ರ ಬಂದಿರುತ್ತವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಹತ್ತಿರದಲ್ಲಿ ರಾಷ್ಟ್ರೀಯ ಹೆದ್ದಾರಿ ಆಗುತ್ತಿರುವುದರಿಂದ ಸ್ವತ್ತುಗಳ ಬೆಲೆ ಹೆಚ್ಚಾಗಿರುವುದರಿಂದ ಅವುಗಳನ್ನು ಹೊಡೆದುಕೊಳ್ಳುವ ಉದ್ದೇಶದಿಂದ ನಾನು ಸುಳ್ಳು ದಾವೆಯನ್ನು ದಾಖಲಿಸಿರುತ್ತೇವೆ

ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೇ ಹಕ್ಕು ಇರದೇ ಇದ್ದರೂ ಸಹ ನಾವು ಬೇರೆ ಪ್ರತಿವಾದಿಯರೊಂದಿಗೆ ಶರೀಕಾಗಿ ಸುಳ್ಳು ದಾವೆ ದಾಖಲಿಸಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 2 ನೇ ಪ್ರತಿವಾದಿ ಪರವಾಗಿ ಶ್ರೀ ಕೆ.ಸಿ.ಎನ್. ವಕೀಲರಿಂದ**

2 ನೇ ಪ್ರತಿವಾದಿ ಹಾಗೂ ಅವರ ಪರ ವಕೀಲರನ್ನು ಕೂಗಿಸಲಾಯಿತು. ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್